ರಾಜ್ಯದ ಅಭಯಾರಣ್ಯ ಪ್ರದೇಶದಲ್ಲಿ ಆನೆಗಳ ಹತ್ಯೆ.

1515 (2307)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ಅಭಯಾರಣ್ಯ ಪ್ರದೇಶಗಳಲ್ಲಿ ಕಳೆದ ಮೂರು ವರ್ಷಗಳಿಂದ ದಂತದ ಆಸೆಗಾಗಿ ಬಲಿಯಾಗಿರುವ ಆನೆಗಳ ಸಂಖ್ಯೆ ಎಷ್ಟು?

ಆ. ಈ ಆನೆಯ ಹತ್ಯೆ ಪ್ರಕರಣಗಳು ರಾಜ್ಯದ ಗಡಿ ಭಾಗಗಳಲ್ಲಿರುವ ಅರಣ್ಯಗಳಲ್ಲಿಯೇ ಹೆಚ್ಚಾಗಿ ನಡೆದಿರುವುದು ನಿಜವೇ? ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ. ಆನೆಗಳ ಹಂತಕರು ಅತ್ಯಾಧುನಿಕ ಆಯುಧಗಳನ್ನು ಹೊಂದಿದ್ದು ಇದರಿಂದ ಸಾಧಾರಣ ಆಯುಧಗಳನ್ನು ಹೊಂದಿರುವ ಅರಣ್ಯ ರಕ್ಷಕರಿಂದ ಅವರನ್ನು ಹಿಡಿಯಲು ಸಾಧ್ಯವಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ. ಹಾಗಿದ್ದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಅರಣ್ಯ ರಕ್ಷಕರಿಗೂ ಅತ್ಯಾಧುನಿಕ ಆಯುಧಗಳನ್ನು ಒದಗಿಸಬಹುದಲ್ಲವೆ?

ಉ. ಈ ಆನೆಗಳ ಹತ್ಯಾ ಪ್ರಕರಣಗಳಲ್ಲಿ ಅರಣ್ಯ ರಕ್ಷಕರೂ ಷಾಮೀಲಾಗಿರುವುದು ನಿಜವೇ?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಅಭಯಾರಣ್ಯ ಪ್ರದೇಶಗಳಲ್ಲಿ ಬಲಿಯಾದ ಆನೆಗಳ ಸಂಖ್ಯೆ ಈ ಕೆಳಕಂಡಂತಿದೆ.

1998-1999	- 16
1999-2000	- 10
2000-2001	- 11
ಒಟ್ಟು ಸಂಖ್ಯೆ	- 37

ಆ. ಹೌದು. ಇದನ್ನು ತಡೆಗಟ್ಟಲು ಕಳ್ಳ ತಡೆಬೇಟೆ ಶಿಬಿರಗಳನ್ನು ಸೂಕ್ಷ್ಮ ಪ್ರದೇಶದಲ್ಲಿ ನಿಯೋಜಿಸಿದ್ದು, ಸಿಬ್ಬಂದಿ ವರ್ಗದವರಿಗೆ ನಿಸ್ತಂತು ಉಪಕರಣ ನೀಡಿ ರಾತ್ರಿ ಹಗಲು ಗಸ್ತು ಕೆಲಸ ನಿರ್ವಹಿಸುವ ವ್ಯವಸ್ಥೆ ಮಾಡಲಾಗಿದೆ. ಕಾವಲು ಸಿಬ್ಬಂದಿಗೆ ವಾಹನ, ಅಗತ್ಯ ಶಸ್ತ್ರಾಸ್ತ್ರ, ನಿಸ್ತಂತು ಉಪಕರಣ ಪೂರೈಕೆ ಮಾಡಿರುವುದಲ್ಲದೆ ನೆರೆ ರಾಜ್ಯ ಪೋಲೀಸ್ ಇಲಾಖಾ ಅಧಿಕಾರಿಗಳೊಂದಿಗೆ ಆನೆ ಹಂತಕರನ್ನು ಪತ್ತೆ ಹಚ್ಚಲು ನೆರವಾಗುವಂತೆ ಸಂಪರ್ಕ ಇರಿಸಿಕೊಳ್ಳಲಾಗಿದೆ.

ಇ. ಹೌದು. ರಾಜ್ಯದ ಅರಣ್ಯ ಅಧಿಕಾರಿಗಳು ಕೆಲವು ಹಂತಕರನ್ನು ಹಿಡಿದು ಅವರ ಮೇಲೆ ಕ್ರಿಮಿನಲ್ ಕೋರ್ಟ್‌ಗಳಲ್ಲಿ ಕೇಸುಗಳನ್ನು ದಾಖಲು ಮಾಡುವುದರಲ್ಲಿ ಸಫಲರಾಗಿದ್ದಾರೆ.

ಈ. ಅರಣ್ಯ ರಕ್ಷಕರಿಗೂ ಅತ್ಯಾಧುನಿಕ ಆಯುಧಗಳನ್ನು ಒದಗಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ.

ಉ. ಇಲ್ಲ. ಶಾಮೀಲಾಗಿಲ್ಲ.

ಪಶ್ಚಿಮ ಘಟ್ಟದ ಅರಣ್ಯ ಅಭಿವೃದ್ಧಿ.

1516 (2309)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಕಳೆದ ವರ್ಷ ಅಥವಾ ಇಲ್ಲಿಯವರೆಗೆ ಪಶ್ಚಿಮ ಘಟ್ಟಗಳ ಅಭಿವೃದ್ಧಿಗಾಗಿ ವಿದೇಶಿ ಸಂಸ್ಥೆಯ ನೆರವನ್ನು ಪಡೆದಿದೆಯೇ? ಹಾಗಿದ್ದಲ್ಲಿ ಆ ಸಂಸ್ಥೆಯ ಹೆಸರೇನು? ಆ ಸಂಸ್ಥೆಯು ಇಲ್ಲಿಯವರೆಗೆ ಎಷ್ಟು ಮೊತ್ತದ ನೆರವನ್ನು ನೀಡಿದೆ.

ಆ) ಈ ಹಣವನ್ನು ಯೋಜನೇತರ ಕಾರ್ಯಕ್ಕಾಗಿ ಬಳಸಿಕೊಂಡಿರುವುದು ನಿಜವೇ?

ಇ) ಈ ಬಗ್ಗೆ ಸಿ.ಎ.ಜಿ. ವರದಿ ಬಂದಿದೆಯೇ? ಹಾಗಿದ್ದಲ್ಲಿ ಆ ವರದಿಯ ವಿವರ ನೀಡುವುದು?

ಈ) ಈ ನೆರವಿನ ಹಣವನ್ನು ಯಾವ ಯಾವ ಬಾಬತ್ತಿಗೆ ಖರ್ಚು ಮಾಡಲಾಗಿದೆ? ಅವುಗಳ ವಿವರ ನೀಡುವುದು.

ಉ) ಈ ಅವ್ಯವಹಾರದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ